
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI


ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ನವೆಂಬರ್ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ : 11 ಪ್ರಕಟಣೆ : 09–11–2022


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ





ಬೆಂಗಳೂರು ನಿವಾಸಿ ಆಳುಗ್ಗೇಲು ಶ್ರೀ ಎ. ಶ್ರೀಪತಿ ರಾವ್ ತಮ್ಮ ಧರ್ಮಪತ್ನಿ ಶ್ರೀಮತಿ ಪ್ರಭಾವತಿ ಎ. ರಾವ್ ಹಾಗೂ ಅತ್ತೆ-ಮಾವ ಚೊಕ್ಕಾಡಿ ಅನಂತರಾಮ್ ರಾವ್ ಮತ್ತು ಶ್ರೀಮತಿ ಗಿರಿಜಾ ಎ. ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,101/- (ಒಂದು ಲಕ್ಷದ ನೂರ ಒಂದು ರೂಪಾಯಿ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಉಪಾಧ್ಯಕ್ಷೆಯಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ್ ರಾವ್, ಬೆಂಗಳೂರು ಸ್ಥಾನಿಕ ಸಂಘದ ಅಧ್ಯಕ್ಷರಾದ ಶ್ರೀ ರವೀಂದ್ರನಾಥ್ ಬೆಳ್ಳೆ, ಶ್ರೀ ಎ. ಶಂಕರನಾರಾಯಣ್ ರಾವ್, ಶ್ರೀ ಎ. ವೆಂಕಟ್ ರಾವ್, ಚೊಕ್ಕಾಡಿ ಶ್ರೀ ಸುಂದರ್ ರಾವ್, ಕುಮಾರಿ ಪವಿತ್ರ ಮತ್ತು ಕುಟುಂಬಸ್ಥರು ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಮಂಗಳೂರು ಇದರ ಮೂಡಬಿದ್ರೆ ಶಾಖೆಯ ಉದ್ಘಾಟನೆಯ ಪ್ರಯುಕ್ತ ದಿನಾಂಕ 4 ಫೆಬ್ರವರಿ 2022 ಶುಕ್ರವಾರದಂದು ಶ್ರೀ ಚಂದ್ರಶೇಖರ ದೇವಸ್ಥಾನ ಮೂಡಬಿದ್ರೆ ಇಲ್ಲಿ ಶ್ರೀ ದೇವರಿಗೆ ರುದ್ರಾಭಿಷೇಕ ಮತ್ತು ಗಣಹೋಮ ಸೇವೆಯನ್ನು ಸಮರ್ಪಿಸಲಾಯಿತು. ಈ ಸಂದರ್ಭ ದೇವಳದ ಪುರೋಹಿತರಾದ ಶ್ರೀ ರತ್ನಾಕರ ರಾವ್ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 25,000/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆಯನ್ನು ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಉದಯ ಕುಮಾರ್ ಪಿ., ಶ್ರೀ ನಾಗರಾಜ್ ಐ. ಪಿ., ಶ್ರೀಮತಿ ಭುವನಾ ನಾಗರಾಜ್, ಶ್ರೀ ಗಣೇಶ್ ರಾವ್, ಮೂಡಬಿದ್ರೆ ಸಂಘದ ಪದಾಧಿಕಾರಿಗಳು ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.





ಮಂಗಳೂರು ನಿವಾಸಿ ಶ್ರೀಮತಿ ಸ್ನೇಹಲತಾ ದಿವಾಕರ್ ಮತ್ತು ಡಾ। ಸಾಂತೂರು ದಿವಾಕರ್‌ರವರು ತಮ್ಮ ಅತ್ತೆ ಶ್ರೀಮತಿ ಜಲಜಾಕ್ಷಿ ಮತ್ತು ಸಾಂತೂರು ಜನಾರ್ದನಯ್ಯ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 25,000/- (ಇಪ್ಪತ್ತೈದು ಸಾವಿರ ರೂಪಾಯಿ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಉಪಾಧ್ಯಕ್ಷೆಯಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾ ಶ್ರೀನಿವಾಸ್ ಉಪಸ್ಥಿತರಿದ್ದರು.

## 50th ANNIVERSARY ವೈವಾಹಿಕ ಜೀವನದ ಸುವರ್ಣ ಸಂಭ್ರಮ



ನಂದಿಕೂರು ಪಲಾಡಿಗುತ್ತು
ಶ್ರೀ ಎನ್. ಪ್ರಸನ್ನ ಕುಮಾರ್ ಉಪಾಧ್ಯಾಯ
ಹಾಗೂ ಶ್ರೀಮತಿ ಜಯಲಕ್ಷ್ಮೀ ಪ್ರಸನ್ನ ಕುಮಾರ್
'ಸಾರ್ಥಕ' ನಿವಾಸ, ಪಾವಂಜೆ, ಹಳೆಯಂಗಡಿ

50 ವರ್ಷಗಳ ಆರೋಗ್ಯಪೂರ್ಣ ಸಾರ್ಥಕ
ವೈವಾಹಿಕ ಜೀವನ ನಡೆಸಿದ
ಇವರ ಮುಂದಿನ ಜೀವನವು ಸುಖಕರವಾಗಿರಲಿ
ಹಾಗೂ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಕೃಪೆ
ಸದಾ ಇರಲಿ ಎಂದು ಬೇಡಿಕೊಳ್ಳುವ

ಎನ್. ಮಹೇಶ್ ಉಪಾಧ್ಯಾಯ
ರಾಮ್‌ಪ್ರಸಾದ್ ಉಪಾಧ್ಯಾಯ (ಮಕ್ಕಳು)
ಮಂಜುಳ ಉಪಾಧ್ಯಾಯ
ಸೌಮ್ಯ ಪ್ರಸಾದ್ (ಸೊಸೆಯಂದಿರು)
ಅಚಿಂತ್ಯ, ಅನರ್ಘ್ಯ
ಅಭಿನವ್, ಶ್ರೀಯಾ (ಮೊಮ್ಮಕ್ಕಳು)

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.) – ಮನವಿ

'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು, ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ.

ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 36ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.

ಶ್ರೀ ಕರುಣ್ ರಾವ್ ಬೆಳ್ಳೆ
ಮೊಬೈಲ್ : 7337634359
ಶ್ರೀ ಪಿ. ಶ್ರೀಕಾಂತ್ ರಾವ್
ಮೊಬೈಲ್ : 7795116598

- ನಮ್ಮ ಬೌದ್ಧಿಕ ಸೌಂದರ್ಯವೇ ನಿಜಕ್ಕೂ ಎಲ್ಲ ಬಗೆಯ ಸೌಂದರ್ಯಗಳನ್ನು ಮೀರಿಸುವಂತೆ ಕಂಗೊಳಿಸುವುದು. – ಸಿ. ವಿ. ರಾಮನ್
- ಶ್ರೇಷ್ಠ ಸತ್ಯವೆಂದರೆ ಪ್ರಾಮಾಣಿಕತೆ. ಅತಿದೊಡ್ಡ ಸುಳ್ಳೆಂದರೆ ಅಪ್ರಾಮಾಣಿಕತೆ.

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್, ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618


ಸಂಪಾದಕ ಮಂಡಳಿ :
- ನಾಗರಾಜ್ ವರ್ಕಾಡಿ
- ರಘುವೀರ್ ಪೆರ್ಡೂರು
- ಟಿ. ಬಿ. ಮೋಹನ್ ರಾವ್
- ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
- ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
- ಚೇತನ್ ಶರ್ಮ
- ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

Whatsapp : 7795116598 ✆ : 9343361618
e-mail : jnanashakthisss@gmail.com

**ಡಾ। ಬಿ. ಹೆಚ್. ಶ್ರೀಪತಿ ರಾವ್, ಯೇನೆಪೋಯ ಯೂನಿವರ್ಸಿಟಿಯ Pro Vice Chanceller ಇವರಿಗೆ ಇತ್ತೀಚೆಗೆ ಮೈಸೂರಿನಲ್ಲಿ ನಡೆದ 9th Annual State Conference of Association of Oral and Maxillofacial Surgeon of India ಇದರ ಕರ್ನಾಟಕ ಶಾಖೆಯ ವತಿಯಿಂದ ಅವರ ಅಪಾರ ಸೇವೆಯನ್ನು ಪರಿಗಣಿಸಿ 'LIFE TIME ACHIEVEMENT AWARD' ಗೌರವವನ್ನು ಮೈಸೂರಿನ ಮಹಾರಾಜ ಯದುವೀರ ಒಡೆಯರ್ ಅವರಿಂದ ಸನ್ಮಾನಿತರಾಗಿರುತ್ತಾರೆ.**

ಡಾ। ಶ್ರೀಪತಿ ರಾವ್‌ರವರು ORAL AND MAXILLOFACIAL SURGEON ಆಗಿದ್ದು, ಯೇನೆಪೋಯ ವಿಶ್ವವಿದ್ಯಾನಿಲಯದಲ್ಲಿ 25 ವರ್ಷಗಳಷ್ಟು ದೀರ್ಘಕಾಲ ವಿವಿಧ ಹುದ್ದೆಗಳು, ಜವಾಬ್ದಾರಿಗಳನ್ನು ನಿರ್ವಹಿಸಿದ್ದರು.

ಶ್ರೀಯುತರ ಸೇವಾಬದ್ಧತೆ, ಪಾರದರ್ಶಕ ಆಡಳಿತ ವೈಖರಿ, ಪ್ರಯೋಗಶೀಲ ಕಲಿಕಾ ಪದ್ಧತಿ ಇವುಗಳನ್ನು ಪರಿಗಣಿಸಿ YENEPOYA DEEMED UNIVERSITYಯಲ್ಲಿ ಅವರನ್ನು PRO VICE CHANCELLER ಆಗಿ ಆಯ್ಕೆ ಮಾಡುವುದರೊಂದಿಗೆ ಅತ್ಯಂತ ಗೌರವದ ಹುದ್ದೆಯನ್ನು ನೀಡಲಾಯಿತು.

ಮುಲ್ಕಿಯ ಬಪ್ಪನಾಡಿನಲ್ಲಿ ಪ್ರತಿಷ್ಠಿತ 'ವೈದ್ಯಾಶ್ರಮ' ಕುಟುಂಬದಲ್ಲಿ ಕಿರಿಯವನಾಗಿ ಜನಿಸಿದ ಶ್ರೀಪತಿ ರಾವ್‌ರವರು ಮಣಿಪಾಲ್ ಡೆಂಟಲ್‌ನಲ್ಲಿ 1976-80ರಲ್ಲಿ ತನ್ನ BDS and MDS ಪದವಿಯನ್ನು ಪೂರ್ಣಗೊಳಿಸಿದರು. ಈ ಸಂದರ್ಭದಲ್ಲಿ ಅವರಿಗೆ 'GOOD TEACHER AWARD' ಒದಗಿ ಬಂತು. ಹೃದಯವಂತ ಶಿಕ್ಷಕನಾದ ಶ್ರೀಪತಿ ರಾವ್ ಅವರು ದೇಶ–ವಿದೇಶಗಳಲ್ಲಿ ಹಲವು PHD ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ (Guide) ಆಗಿ ಸೇವೆ ಸಲ್ಲಿಸಿರುತ್ತಾರೆ. ದೇಶ–ವಿದೇಶಗಳ ದಂತ ವೈದ್ಯಕೀಯ Conference (ವಿಚಾರಗೋಷ್ಠಿ)ಗಳಲ್ಲಿ ಇವರು MAXILLOFACIAL SURGERYಯ ಬಗ್ಗೆ ವಿಶೇಷ ಉಪನ್ಯಾಸಗಳನ್ನು ನೀಡಿದ್ದರು.

**ನಮ್ಮವರೇ ಆದ ಶ್ರೀಪತಿ ರಾವ್‌ರವರ ಮುಂದಿನ ಬದುಕು ಅತ್ಯಂತ ಸಂತೃಪ್ತ ಹಾಗೂ ಸಾರ್ಥಕವಾಗಲೆಂದು ಜ್ಞಾನಶಕ್ತಿ ಹಾರೈಸುತ್ತದೆ.**

# ಶ್ರೀ ಶೃಂಗೇರಿ ಶಂಕರ ಮಠ ಉಡುಪಿ ಶಾಖಾ



**ಪ್ರಿಯ ಬಂಧುಗಳೆ,**

ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳು ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜದ ಬಗ್ಗೆ ಬಹಳ ವಾತ್ಸಲ್ಯ ಹೊಂದಿದವರು. ಹಾಗಾಗಿ ನಮ್ಮ ಬ್ರಾಹ್ಮಣ್ಯದ ಬಗ್ಗೆ ಹೆಚ್ಚಿನ ಇತರ ಬ್ರಾಹ್ಮಣರು ಸಂಶಯ ವ್ಯಕ್ತಪಡಿಸಿದಾಗ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ವಿಚಾರವಿಮರ್ಶೆ ನಡೆಸಿ ನಮ್ಮ ಯಥಾರ್ಥ ಸ್ಥಾನಮಾನಗಳನ್ನು ಗುರುತಿಸಿದವರು. ಅಷ್ಟೇ ಅಲ್ಲ 'ಶ್ರೀಮುಖ'ವನ್ನು ನೀಡಿ ನಮ್ಮನ್ನು ವ್ಯತ್ಯಾಸವಾಗಿ ಕಾಣುವಂತಿಲ್ಲ ಎಂದು ಲೋಕಕ್ಕೇ ತಿಳಿಸಿದವರು. ಶ್ರೀ ಶ್ರೀಗಳವರು ನಮ್ಮ ಬೆಂಬಲಕ್ಕೆ ನಿಂತು ನಾವೂ ತಲೆ ಎತ್ತಿ ನಿಲ್ಲುವ ಅವಕಾಶ ಕಲ್ಪಿಸಿಕೊಟ್ಟರು. ಅಷ್ಟಲ್ಲದೆ ನಮ್ಮ ಸಮಾಜದ ಹಿರಿಯ ವಿದ್ವಾಂಸರಾದ ಶ್ರೀ ಆತ್ಮಾರಾಮ ಶಾಸ್ತ್ರಿಗಳನ್ನು ಹೆಬ್ಬೂರು ಕೋದಂಡಾಶ್ರಮ ಮಠದ ಮಠಾಧಿಪತಿಗಳನ್ನಾಗಿ ನಿಯೋಜಿಸಿದರು. ಇನ್ನು ಇಬ್ಬರನ್ನು ಧರ್ಮಾಧಿಕಾರಿಗಳನ್ನಾಗಿ ನೇಮಿಸಿದರು. ಅನೇಕರಿಗೆ ಮಠಮುದ್ರಾಧಿಕಾರ ಸ್ಥಾನವನ್ನು ದಯಪಾಲಿಸಿದರು. ನಮ್ಮವರ ಹೆಚ್ಚಿನ ದೇವಾಲಯಗಳಿಗೆ ಭೇಟಿಯಿತ್ತು ಕುಂಭಾಭಿಷೇಕಾದಿ ಕಾರ್ಯಕ್ರಮಗಳನ್ನು ಸಂಪನ್ನಗೊಳಿಸಿದರು. ಇಂತಹ ಸಾಕ್ಷಾತ್ ಪರಮೇಶ್ವರ ಸ್ವರೂಪರಾದ ಮತ್ತು ಶಿಷ್ಯಾನುಗ್ರಹ ತತ್ಪರರಾದ ಗುರುಗಳು ನಮಗೆ ದೊರೆತಿರುವುದು ನಮ್ಮ ಮಹಾಭಾಗ್ಯ. ಆ ಪರಮಪೂಜ್ಯರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ.

ಉಡುಪಿಯಲ್ಲಿ ಶ್ರೀಮಠದ ಶಾಖೆಯನ್ನು ಸ್ಥಾಪಿಸಬೇಕೆಂಬುದು ಪರಿಸರದ ಸಮಾಜ ಬಂಧುಗಳ ಅನೇಕ ವರ್ಷಗಳ ಬೇಡಿಕೆಯಾಗಿತ್ತು. ಈಗ ಆ ಪ್ರಾರ್ಥನೆಗೆ ಶ್ರೀ ಶ್ರೀ ಜಗದ್ಗುರು ಭಾರತೀತೀರ್ಥ ಮಹಾಸನ್ನಿಧಾನಂಗಳವರು ಹಾಗೂ ತತ್ಕರಕಮಲ ಸಂಜಾತರಾದ ಶ್ರೀ ಶ್ರೀ ಜಗದ್ಗುರು ವಿಧುಶೇಖರಭಾರತೀ ಸನ್ನಿಧಾನಂಗಳವರು ಪರಮಾನುಗ್ರಹಪುರಸ್ಸರವಾಗಿ ಸಮ್ಮತಿ ಸೂಚಿಸಿ ಆಶೀರ್ವದಿಸಿದ್ದಾರೆ ಹಾಗೂ ಸೂಕ್ತಸ್ಥಳವನ್ನು ಗುರುತಿಸಲು ಹೇಳಿದ್ದಾರೆ. ಸುಮಾರು ನಾಲ್ಕು ಎಕರೆ ವಿಸ್ತೀರ್ಣದ ಸಮತಲದ ಭೂಮಿಯನ್ನು ಹುಡುಕಿ ಅದನ್ನು ಶ್ರೀಗುರುಗಳಲ್ಲಿ ನಿವೇದಿಸಿಕೊಂಡಾಗ ಒಪ್ಪಿಕೊಂಡು ವ್ಯಾವಹಾರಿಕ ವ್ಯವಸ್ಥೆಗಳನ್ನು ಶ್ರೀಮಠದ ಮಾನ್ಯ ಆಡಳಿತಾಧಿಕಾರಿಗಳಾದ ಪದ್ಮಶ್ರೀ ಡಾ. ವಿ. ಎಸ್. ಗೌರಿಶಂಕರ್ ಇವರಲ್ಲಿ ಮಾತನಾಡುವಂತೆ ಆದೇಶಿಸಿದರು. ಆಡಳಿತಾಧಿಕಾರಿಗಳಲ್ಲಿ ನಿವೇದಿಸಿಕೊಂಡಾಗ ಎರಡು ಎಕರೆಯನ್ನು ಖರೀದಿಸಲು ಸಿದ್ಧ ಎಂದಿದ್ದಾರೆ. ಉಳಿದ ಭೂಮಿಯನ್ನು ನಮ್ಮ ಸಮಾಜದವರೇ ಖರೀದಿ ಮಾಡಿ ಶ್ರೀಗುರುಗಳಿಗೆ ಅರ್ಪಿಸುವುದೆಂದು ಯೋಚಿಸಿದ್ದೇವೆ. ಒಂದು ಸೆಂಟ್ಸ್ ಭೂಮಿಗೆ ಸುಮಾರು ರೂಪಾಯಿ ಒಂದು ಲಕ್ಷದಂತೆ ಸಂಗ್ರಹಿಸುವ ಯೋಜನೆ ಮಾಡಿದ್ದೇವೆ. ಆದ್ದರಿಂದ ಶ್ರೀಗುರುಪೀಠಕ್ಕೆ ನಮ್ಮ ಆತ್ಯಂತಿಕವಾದ ಕೃತಜ್ಞತೆಯ ಸಮರ್ಪಣೆಗಾಗಿ ನಡೆಸುವ ಈ ಪ್ರಯತ್ನದಲ್ಲಿ ಎಲ್ಲ ಸಮಾಜಬಂಧುಗಳ ಹೃತ್ಪೂರ್ವಕ ಸಹಕಾರ ಅತ್ಯವಶ್ಯಕವಾದುದು. ತಮ್ಮೆಲ್ಲರ ಬೆಂಬಲದ ನಿರೀಕ್ಷೆ ನಮ್ಮದು.

---

**ಧನಸಹಾಯ ನೀಡುವವರು** 'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c. No. 0182500101876001
IFSC Code : KARB 0000018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್/ಡಿಡಿ ಇತ್ಯಾದಿಗಳನ್ನು ಕಳುಹಿಸಬೇಕಾಗಿ ಪ್ರಾರ್ಥನೆ.
80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು **'Sri Sringeri Sharada Peetham Charitable Trust, Sringeri'**
ಈ ಹೆಸರಿನಲ್ಲಿ ಚೆಕ್ / ಡಿಡಿ ಇತ್ಯಾದಿಗಳನ್ನು ನೀಡಬೇಕಾಗಿ ವಿನಂತಿಸುತ್ತೇವೆ.


**ತಮ್ಮೆಲ್ಲರ ಬೆಂಬಲದ ನಿರೀಕ್ಷೆ ನಮ್ಮದು.**

**ಪದ್ಮಶ್ರೀ ಡಾ. ವಿ. ಎಸ್. ಗೌರೀಶಂಕರ್,** ಮಾನ್ಯ ಆಡಳಿತಾಧಿಕಾರಿಗಳು, ಶ್ರೀ ಶಾರದಾ ಪೀಠ, ಶೃಂಗೇರಿ

**ಸಂಪರ್ಕಿಸಬೇಕಾದವರ ವಿಳಾಸ**

| | | | | |
|---|---|---|---|---|
| **ವೇದಮೂರ್ತಿ ವಾಗೀಶ ಎಸ್. ಶಾಸ್ತ್ರೀ** | **ಶ್ರೀ ಎ. ಶಿವ ರಾವ್** | **ಶ್ರೀ ಬಿ. ಕೆ. ಧನಂಜಯ ರಾವ್** | **ಶ್ರೀ ಕೆ. ಮಂಜುನಾಥ ಹೆಬ್ಬಾರ್** | **ಶ್ರೀ ಕರುಣ್ ರಾವ್ ಬೆಳ್ಳೆ** |
| ಸಮಿತಿ ಸಂಚಾಲಕರು, ಉಡುಪಿ ಪ್ರಾಂತೀಯ ಧರ್ಮಾಧಿಕಾರಿ, ಶೃಂಗೇರಿಮಠ | ಚಾರ್ಟರ್ಡ್ ಅಕೌಂಟೆಂಟ್ ಬೆಂಗಳೂರು | ನ್ಯಾಯವಾದಿಗಳು ಲ್ಯಾಲ, ಬೆಳ್ತಂಗಡಿ | ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಭಾ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ | ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು |
| ✆ : 9449591513 | ✆ : 9880570747 | ✆ : 9480055581 | ✆ : 9611099894 | ✆ : 7337634359 / 9243309120 |

# ಕಾಶ್ಮೀರದ ಶಾರದೆಗೆ ಶೃಂಗೇರಿಯಲ್ಲಿ ವಿಶೇಷ ಪೂಜೆ
# ಅಕ್ಟೋಬರ್ 5ರಂದು ವಿಶೇಷ ಪೂಜೆ, ಹಸ್ತಾಂತರ ಕಾರ್ಯ





ಭರತ ಖಂಡದ ತುತ್ತತುದಿಯ ಕಾಶ್ಮೀರದ ನೀಲಂ ಕಣಿವೆಯ ತ್ರಿತ್ವಾಲ್‌ನ ನವೀಕೃತ ಶ್ರೀ ಶಾರದಾದೇವಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲ್ಪಡುವ ನೂತನ ಶ್ರೀ ಶಾರದಾದೇವಿ ವಿಗ್ರಹಕ್ಕೆ ವಿಶೇಷ ಪೂಜೆ ಹಾಗೂ ಹಸ್ತಾಂತರ ಕಾರ್ಯ ವಿಜಯದಶಮಿಯಂದು ಶೃಂಗೇರಿಯಲ್ಲಿ ನಡೆಯಲಿದೆ.

ಈ ದೇವಸ್ಥಾನದ ನಿರ್ಮಾಣದ ಹೊಣೆಯನ್ನು ಶ್ರೀಮಠ ವಹಿಸಿಕೊಂಡಿದ್ದು, ಕಾಮಗಾರಿ ಬಹುತೇಕ ಮುಗಿದಿದೆ. ಛಾವಣಿ ನಿರ್ಮಾಣವಷ್ಟೇ ಬಾಕಿಯಿದ್ದು, ಅಕ್ಟೋಬರ್ ಮಾಸಾಂತ್ಯಕ್ಕೆ ಪೂರ್ಣಗೊಳ್ಳಲಿದೆ ಎನ್ನಲಾಗಿದೆ.

ಪಂಚಲೋಹದಲ್ಲಿ ನಿರ್ಮಿತ ನೂತನ ಶ್ರೀದೇವಿಯ ವಿಗ್ರಹವನ್ನು ಶೃಂಗೇರಿ ಶ್ರೀಮಠದಿಂದ ನೀಡಲಾಗುತ್ತಿದೆ. ವಿಜಯದಶಮಿ ಶುಭದಿನವಾದ ಬುಧವಾರ ವಿಶೇಷ ಪೂಜೆ ಸಲ್ಲಿಸಿ ತ್ರಿತ್ವಾಲ್‌ನ ಶಾರದಾ ಸಂರಕ್ಷಣಾ ಸಮಿತಿಯ ರವೀಂದ್ರ ಪಂಡಿತ್ ಮತ್ತು ತಂಡದವರಿಗೆ ಹಸ್ತಾಂತರ ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

**ಜಗದ್ಗುರುಗಳ ಸಾನ್ನಿಧ್ಯ**

ಬೆಂಗಳೂರಿನ ಶಿಲ್ಪಿಗಳು ಶಾರದಾದೇವಿ ವಿಗ್ರಹ ರಚನೆಯ ಕಾರ್ಯ ಪೂರ್ಣಗೊಳಿಸಿದ್ದು, ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ಹಾಗೂ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳ ಸಮ್ಮುಖದಲ್ಲಿ ವಿಗ್ರಹದ ಹಸ್ತಾಂತರ ನಡೆಯಲಿದೆ.

**ಸಾದರಹಳ್ಳಿ ಕಲ್ಲು ಬಳಕೆ :** ಕಾಶ್ಮೀರದಲ್ಲಿನ ಶ್ರೀ ಶಾರದಾದೇವಿ ದೇವಸ್ಥಾನ ನಿರ್ಮಾಣಕ್ಕೆ ಬೆಂಗಳೂರಿನ ಸಾದರಹಳ್ಳಿ ಕಲ್ಲುಗಳನ್ನು ಬಳಸಲಾಗಿದೆ. ಎರಡು ತಂಡಗಳು ಈ ಕಲ್ಲುಗಳ ಕೆತ್ತನೆ ಕಾರ್ಯವನ್ನು ಕೈಗೊಂಡಿದ್ದವು. ನಾಲ್ಕು ಲಾರಿಗಳಲ್ಲಿ ಕಲ್ಲುಗಳನ್ನು ತ್ರಿತ್ವಾಲ್‌ಗೆ ರವಾನಿಸಲಾಗಿತ್ತು. ಕಲ್ಲುಗಳನ್ನು ಸಾಗಿಸಲು ಅಂದಾಜು ರೂ. 16 ಲಕ್ಷ ವೆಚ್ಚವಾಗಿರುತ್ತದೆ. ಕೆತ್ತನೆ ಕಾರ್ಯಕ್ಕೆ ಅಂದಾಜು ರೂ. 6.5 ಲಕ್ಷ ಹಾಗೂ ಕಲ್ಲುಗಳ ಜೋಡಣೆಗೆ ರೂ. 8 ಲಕ್ಷ ವೆಚ್ಚವಾಗಿದೆ ಎನ್ನಲಾಗಿದೆ.

**ಸಂಕ್ರಾಂತಿಗೆ ಪ್ರತಿಷ್ಠಾಪನೆ :** ಅಕ್ಟೋಬರ್ ಮಾಸಾಂತ್ಯಕ್ಕೆ ದೇವಸ್ಥಾನ ಸಿದ್ಧವಾದರೂ ಆ ಬಳಿಕ ಕಾಶ್ಮೀರ ಭಾಗದಲ್ಲಿ ಹಿಮ ಹೆಚ್ಚು ಆವರಿಸಿಕೊಳ್ಳುತ್ತದೆ. ಆ ಸಮಯದಲ್ಲಿ ಅಲ್ಲಿಗೆ ಸಂಪರ್ಕಿಸುವುದು ಒಂದು ಸವಾಲಿನ ಕೆಲಸವಾಗಿದೆ. ಮುಂದಿನ ಜನವರಿ ಫೆಬ್ರವರಿ–ಮಾರ್ಚ್ ವೇಳೆಗೆ ಹಿಮ ಪ್ರಮಾಣ ಕಡಿಮೆಯಾಗುವುದರಿಂದ ಸಂಕ್ರಾಂತಿ ವೇಳೆಗೆ ಶ್ರೀ ಶಾರದಾದೇವಿ ವಿಗ್ರಹ ಪ್ರತಿಷ್ಠಾಪನೆ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎನ್ನಲಾಗಿದೆ.

ಹಿಮ ಸುರಿಯುವ ಸಂದರ್ಭದಲ್ಲಿ ಜಲಸಮಾಧಿ, ಮಂಡಲ ಪೂಜೆ ಸೇರಿ ವಿವಿಧ ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸುವುದು ಕಷ್ಟಸಾಧ್ಯ. ಆದ ಕಾರಣ ವಿಜಯದಶಮಿ ಶುಭದಿನದ ಹಿನ್ನಲೆಯಲ್ಲಿ ವಿಗ್ರಹ ಹಸ್ತಾಂತರ ಕಾರ್ಯ ಮಾತ್ರ ನಡೆಯಲಿದೆ. ಸಂಕ್ರಾಂತಿಯ ಬಳಿಕ ಭಕ್ತರಿಗೆ ಶ್ರೀ ಶಾರದಾದೇವಿಯ ದರ್ಶನ ಲಭ್ಯವಾಗಲಿದೆ. ಅಲ್ಲಿಗೆ ತೆರಳುವವರು ಆನ್‌ಲೈನ್ ಮೂಲಕ ಅಲ್ಲಿಯ ಆಡಳಿತದಿಂದ ಅನುಮತಿಯನ್ನು ಮುಂದಾಗಿ ಪಡೆಯಬೇಕಿದೆ.

**ದೇಗುಲದ ಇತಿಹಾಸ :** ತ್ರಿತ್ವಾಲ್‌ನ ಶಾರದಾ ನಗರಿಯಲ್ಲಿರುವ ಈ ದೇವಸ್ಥಾನ ಹಿಂದೆ ಈಶ್ವರ, ಗಣಪತಿ, ಪಾರ್ವತಿ, ವಿಷ್ಣು ಸಾನ್ನಿಧ್ಯದಿಂದ ಒಳಗೊಂಡ ಶಕ್ತಿಪೀಠವಾಗಿತ್ತು. ಅನಂತರದ ದಿನಗಳಲ್ಲಿ ನಡೆದ ದಾಳಿಗಳಿಂದ ತಮ್ಮ ಅಸ್ತಿತ್ವ ಕಳೆದುಕೊಂಡಿತ್ತು. ಈಗ ಮತ್ತೆ ಈ ಪವಿತ್ರ ಸ್ಥಳದಲ್ಲಿ ಶಾರದಾ ದೇವಸ್ಥಾನವು ಪುನರ್‌ನಿರ್ಮಾಣಗೊಳ್ಳುತ್ತಿದೆ.


**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್ ಹಾಗೂ**
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

*Sri Hari Adyapady*
*Proprietor*

Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE

*We undertake all types of Electrical, Plumbing and Sanitary works*

Muralidhara Rao Adyapadi
Proprietor
Mob : 94480 27259
99803 16434

**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**

Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

## ಕರ್ವಾಲು ದೇವಸ್ಥಾನಕ್ಕೆ ದೇಣಿಗೆ



ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ವೇದಿಕೆ ಕಾರ್ಯದರ್ಶಿ, ನಿವೃತ್ತ ಶಿಕ್ಷಕಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ದಂಪತಿ ಮತ್ತು ಮಕ್ಕಳು ಕರ್ವಾಲಿನ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶ ಸಮಿತಿಗೆ ರೂ. 25,000/– ದೇಣಿಗೆಯನ್ನು ಸಮಿತಿ ಅಧ್ಯಕ್ಷ ಶ್ರೀ ಪಟ್ಟಾಭಿರಾಮ ರಾವ್ ಮತ್ತು ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ನೀಡಿದರು.

## ಅಪಾರಕೀರ್ತಿ ಗಳಿಸಿ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಪುತ್ತೂರು ಇದರ ವತಿಯಿಂದ ಶ್ರೀ ರಾಮಕುಂಜೇಶ್ವರ ಕನ್ನಡ ಮಾಧ್ಯಮ ಶಾಲೆ, ರಾಮಕುಂಜ ಇಲ್ಲಿ ನಡೆದ ಪುತ್ತೂರು ತಾಲೂಕು ಮಟ್ಟದ 'ಪ್ರತಿಭಾ ಕಾರಂಜಿ'ಯಲ್ಲಿ ತೆಂಕಿಲ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 7ನೇ ತರಗತಿಯ ವಿದ್ಯಾರ್ಥಿನಿ **ಕು। ಸುಪ್ರಜಾ ರಾವ್** (ಡಾ। ಪ್ರಶಾಂತ್ ರಾವ್ ಮತ್ತು ಶ್ರೀಮತಿ ಸುಮನಾ ಕೆ. ಇವರ ಪುತ್ರಿ) ಇವರು ಲಘು ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳಿಗೆ ಆಯ್ಕೆಯಾಗಿರುತ್ತಾರೆ.

## ಮನೆಯೇ ಮಂತ್ರಾಲಯ


ಪಾವಂಜೆ ಶ್ರೀ ಭಾಗ್ಯಚಂದ್ರರವರ ಸುಪುತ್ರ ಶ್ರೀ ಭರತ್ ಮತ್ತು ಶ್ರೀಮತಿ ರಶ್ಮಿ ದಂಪತಿಗಳು ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ ನೂತನವಾಗಿ ನಿರ್ಮಿಸಿದ ಗೃಹ **'ಅನವರತ'**ದ ಪ್ರವೇಶೋತ್ಸವವು ಆಗಸ್ಟ್ ತಿಂಗಳಲ್ಲಿ ನೆರವೇರಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ದಿ। ಪ್ರಭಾಕರ್ ರಾವ್ ಉಜ್ಜೋಡಿಯವರ ಪತ್ನಿ **ಶ್ರೀಮತಿ ಗಾಯತ್ರಿ ರಾವ್** (74) ತಾ. 18–10–2022ರ ಮಂಗಳವಾರ ನಿಧನ ಹೊಂದಿದರು. ಅವರು ಓರ್ವ ಪುತ್ರ, ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *




ದಿ। ಬೆಳ್ಳೆ ವಿಠ್ಠಲ್ ರಾವ್ ಮತ್ತು ದಿ। ಪದ್ಮಾವತಿ ರಾವ್‌ರವರ ಸುಪುತ್ರ **ಶ್ರೀ ಬೆಳ್ಳೆ ದಿನೇಶ್ ರಾವ್** (87) ತಾ. 27–10–2022ರ ಗುರುವಾರ ಮೈಸೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ, ಪುತ್ರಿ, ನಾಲ್ವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ. ಇವರು ಬೆಂಗಳೂರು ಸ್ಥಾನಿಕ ಸಭಾದ ಅಧ್ಯಕ್ಷ ಶ್ರೀ ರವೀಂದ್ರನಾಥ ಬೆಳ್ಳೆಯವರ ಹಿರಿಯ ಸಹೋದರ.

* * *



**ಶ್ರೀ ಕೊಯಿಲ ಶ್ರೀಧರ ರಾವ್** (82) ತಾ. 1–11–2022ನೇ ಮಂಗಳವಾರ ಉಪ್ಪಿನಂಗಡಿಯ ಪಾದಾಳದ 'ಶ್ರೀಸುತ' ಮನೆಯಲ್ಲಿ ಶಿವೈಕ್ಯರಾಗಿರುತ್ತಾರೆ. ಇವರು ಇಬ್ಬರು ಪುತ್ರರು, ಪುತ್ರಿಯರು ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *



ಮುಂಬಯಿ ನಿವಾಸಿ **ಶ್ರೀ ಪಡುಬಿದ್ರಿ ಭವಾನಿಶಂಕರ ರಾವ್** (90) ತಾ. 7–11–2022ನೇ ಸೋಮವಾರ ನಿಧನಹೊಂದಿದರು. ಇವರು ಕೊಡುಗೈ ದಾನಿಯಾಗಿದ್ದು ಮುಂಬೈ ಶ್ರೀ ಸುಬ್ರಹ್ಮಣ್ಯ ಸಂಘದ ಸಕ್ರಿಯ ಸದಸ್ಯರಾಗಿದ್ದರು.

## ದ್ವಾರಕಾ – ಬದರಿ ಶ್ರೀಗಳಿಗೆ ಅನುಗ್ರಹ ಶ್ರೀಗಳಿಗೆ ದಂಡ – ಕಮಂಡಲ ನೀಡಿದ ಶೃಂಗೇರಿ ಶ್ರೀಗಳು



*ಶ್ರೀ ಶಾರದಾ ಪೀಠದಲ್ಲಿ ದ್ವಾರಕಾ ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಗಳು ದ್ವಾರಕಾ ಹಾಗೂ ಬದರಿ ಪೀಠದ ಜಗದ್ಗುರುಗಳಿಗೆ ದಂಡ ಕಮಂಡಲ ನೀಡಿ ಅನುಗ್ರಹಿಸಿದರು.*

ಪಶ್ಚಿಮಾಮ್ನಾಯ ದ್ವಾರಕಾ ಪೀಠದ ಉತ್ತರಾಧಿಕಾರಿ ಜಗದ್ಗುರು ಶಂಕರಾಚಾರ್ಯ ಶ್ರೀ ಸದಾನಂದ ಸರಸ್ವತಿ ಸ್ವಾಮೀಜಿಗಳು ಮತ್ತು ಉತ್ತರಾಮ್ನಾಯ ಬದರಿ ಜ್ಯೋತಿರ್ಪೀಠದ ಉತ್ತರಾಧಿಕಾರಿ ಜಗದ್ಗುರು ಶ್ರೀ ಅವಿಮುಕ್ತೇಶ್ವರಾನಂದ ಸರಸ್ವತಿ ಮಹಾಸ್ವಾಮೀಜಿಗೆ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿ ಸೋಮವಾರ ದಂಡ, ಕಮಂಡಲ ನೀಡಿ ಅನುಗ್ರಹಿಸಿದರು.

ಆಶ್ವಯುಜ ಮಾಸದ ಶುಕ್ಲಪಕ್ಷದ ಪಾಡ್ಯದ ದಿನ ನೂತನ ಉಭಯ ಜಗದ್ಗುರುಗಳಿಗೆ ಪೀಠದ ಸಂಕೇತವಾಗಿ ಶ್ರೀ ಭಾರತೀತೀರ್ಥ ಸ್ವಾಮೀಜಿಗಳು ಅನುಗ್ರಹಿಸಿರುವುದು ವಿಶೇಷವಾಗಿದೆ. ಈ ಹಿಂದೆ ಜ್ಯೋತಿರ್ಪೀಠದ ಬದರಿ ಶಂಕರಾಚಾರ್ಯ ಶ್ರೀ ಸ್ವರೂಪಾನಂದ ಸರಸ್ವತಿ ಸ್ವಾಮೀಜಿಗಳಿಗೂ ಇಲ್ಲಿನ 35ನೇ ಜಗದ್ಗುರು ಶ್ರೀ ವಿದ್ಯಾತೀರ್ಥ ಸ್ವಾಮೀಜಿ ಪಟ್ಟಾಭಿಷೇಕ ನೆರವೇರಿಸಿದ್ದರು.

ಸೋಮವಾರ ಬೆಳಗ್ಗೆ ಶ್ರೀ ಶಾರದಾ ಪೀಠದಲ್ಲಿ ದಂಡ, ಕಮಂಡಲ ನೀಡುವ ಪೂರ್ವಭಾವಿಯಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಶ್ರೀಮಠದ ಪುರೋಹಿತರಾದ ಶಿವಕುಮಾರ ಶರ್ಮ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನ ನಡೆಯಿತು. ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಉಪಸ್ಥಿತರಿದ್ದರು. ಶ್ರೀಮಠದ ಆಡಳಿತಾಧಿಕಾರಿ ಡಾ। ವಿ. ಆರ್. ಗೌರೀಶಂಕರ್, ಅಧಿಕಾರಿಗಳಾದ ಶಿವಶಂಕರ ಭಟ್, ದಕ್ಷಿಣಾಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ದೀಪಾವಳಿ ಆಚರಣೆ ಸಾಂಪ್ರದಾಯಿಕ ಉಡುಗೆ ಸ್ಪರ್ಧಾ ವಿಜೇತರು

**ಮಕ್ಕಳ ವಿಭಾಗ**


**ಹುಡುಗರು** – ಪ್ರಥಮ : **ಆದೀಶ್** ದ್ವಿತೀಯ : **ಗೌರೀಶ್ ರಾವ್**

**ಹುಡುಗಿಯರು** – ಪ್ರಥಮ : **ಅಂಕಿತಾಶ್ರೀ** ದ್ವಿತೀಯ : **ಶ್ರೀಯಾ**


**ಹಿರಿಯರ ವಿಭಾಗ**

**ಪುರುಷರ ವಿಭಾಗ** – ಪ್ರಥಮ : **ಶ್ರೀ ಪಿ. ಶ್ರೀಕಾಂತ್ ರಾವ್**
ದ್ವಿತೀಯ : **ಶ್ರೀ ರಘುವೀರ್ ಪೆರ್ಡೂರ್**

**ಮಹಿಳಾ ವಿಭಾಗ** – ಪ್ರಥಮ : **ಶ್ರೀಮತಿ ಕನಕವಲ್ಲಿ ಹರ್ಷಕುಮಾರ್**
ದ್ವಿತೀಯ : **ಶ್ರೀಮತಿ ಶಶಿಕಲಾ ಮತ್ತು ಶ್ರೀಮತಿ ಪ್ರೀತಿಕಾ**

**PRAMOD AUTOMOBILES**
KARANGALPADY
MANGALORE- 575 003
30 Years of Service
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR



# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ – ವಾರ್ಷಿಕ ಮಹಾಸಭೆ



ದಿನಾಂಕ 30–10–2022ನೇ ರವಿವಾರ ನಮ್ಮ ಸಂಘದ 9ನೇ ವರ್ಷದ ವಾರ್ಷಿಕೋತ್ಸವವು ಇಡ್ಯಾ ವಿದ್ಯಾದಾಯಿನಿ ಪ್ರೌಢಶಾಲೆಯ ವಜ್ರಮಹೋತ್ಸವದ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ವಹಿಸಿದ್ದರು.

ಕು। ಸೌಜನ್ಯ ಫಾಲಚಂದ್ರ ಶರ್ಮ ಪ್ರಾರ್ಥನೆ ಮಾಡಿದ ಬಳಿಕ ಶ್ರೀ ವಾಸುದೇವ ಶ್ಯಾನುಭೋಗರು ಸ್ವಾಗತಿಸಿದರು. ಶ್ರೀ ಫಾಲಚಂದ್ರ ಶರ್ಮ ಮಹಾಸಭೆಯ ನೋಟೀಸನ್ನು ಹಾಗೂ ವರದಿಯನ್ನು ಶ್ರೀ ರಾಘವೇಂದ್ರ ರಾವ್ ಸಿ. ಇವರು ಲೆಕ್ಕಪತ್ರ ಮತ್ತು ಅಂದಾಜು ಆಯ–ವ್ಯಯ ತಖ್ತೆಯನ್ನು ವಾಚಿಸಿದರು.

ಮಹಾಸಭೆಯ ಬಳಿಕ ಹಿರಿಯರನ್ನು ಹಾಗೂ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮವು ನಡೆಯಿತು. ಶ್ರೀ ಸಿ. ಸೀತಾರಾಮ ರಾವ್ ಕಾವೂರು, ಶ್ರೀಮತಿ ಲಲಿತಾ ಸುಂದರ ರಾವ್ ಚಿತ್ರಾಪುರ ಮತ್ತು ನಿವೃತ್ತ ಅಧ್ಯಾಪಕರಾದ ಶ್ರೀ ರಾಘವೇಂದ್ರ ಸಿ. ರಾವ್, ಕಲಾಕ್ಷೇತ್ರದಲ್ಲಿ ಸೇವೆಗೈದ ಶ್ರೀಮತಿ ಪ್ರಶಾಂತಿ ಸತೀಶ್ ರಾವ್ ತಡಂಬೈಲ್ ಹಾಗೂ ವಿಮಾ ಸಂಸ್ಥೆಯಲ್ಲಿ ಹಿರಿಯ ಸಹಾಯಕರಾಗಿ ಸೇವೆಗೈದು ನಿವೃತ್ತರಾದ ಶ್ರೀ ವಾಸುದೇವ ಶ್ಯಾನುಭೋಗ್ ಅಂತೆಯೇ ಕರ್ನಾಟಕ ಸರಕಾರದ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ವತ್ಸಲಾ ಕುಮಾರಿ ಸಿ. ಇವರಿಗೆ ವೇದಿಕೆಯಲ್ಲಿರುವ ಗಣ್ಯರು ಸೇರಿ ಗೌರವಿಸಿದರು.

2021–22ನೇ ಸಾಲಿನಲ್ಲಿ ನಡೆದ ವಿವಿಧ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಯಿತು. ಮಾತ್ರವಲ್ಲದೆ ಪಿ.ಯು.ಸಿ.ಯಲ್ಲಿ ಜಿಲ್ಲೆಯಲ್ಲೇ 6ನೇ ಸ್ಥಾನ ಪಡೆದ ಕು। ಸ್ಮಿತಾಳನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್, ಶ್ರೀಮತಿ ವತ್ಸಲಾ ಕುಮಾರಿ, ಪ್ರೊ। ಶ್ರೀ ಪಿ. ಕೃಷ್ಣಮೂರ್ತಿ (ಗೋವಿಂದದಾಸ ಕಾಲೇಜಿನ ಪ್ರಾಂಶುಪಾಲರು) ಅಖಿಲ ಭಾರತ ಸ್ಥಾನಿಕ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಎಂ. ದೇವಾನಂದ ಭಟ್, ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ ರಾವ್, ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಬಾರ್ಕೂರು ಬ್ರಹ್ಮಾವರ ಸ್ಥಾನಿಕ ಬ್ರಾಹ್ಮಣ ಸಂಘದ ಉಪಾಧ್ಯಕ್ಷರಾದ ಶ್ರೀ ಜಯರಾಮ್ ರಾವ್, ಸುರತ್ಕಲ್ ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶ್ಯಾನುಭೋಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಗಳಾದ ಶ್ರೀ ಫಾಲಚಂದ್ರ ಶರ್ಮ, ಜೊತೆ ಕಾರ್ಯದರ್ಶಿಗಳಾದ ಶ್ರೀ ಶಿವಪ್ರಸಾದ್ ಶ್ಯಾನುಭೋಗ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳಾ ಪ್ರಶಾಂತ್, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಕಾರ್ತಿಕ್ ಉಪಸ್ಥಿತರಿದ್ದರು.

ವೇದಿಕೆಯಲ್ಲಿ ಪ್ರಮುಖ ಅತಿಥಿಗಳು ಸಂಘದ ಕಾರ್ಯವನ್ನು ಶ್ಲಾಘಿಸಿದರು. ಅಧ್ಯಕ್ಷರು ಮಾತನಾಡುತ್ತಾ ನಮ್ಮ ಸಂಘ 9 ವರ್ಷಗಳನ್ನು ಪೂರೈಸಿ ದಶಮಾನೋತ್ಸವದ ಸಂಭ್ರಮಕ್ಕೆ ಸಮೀಪಿಸುತ್ತಿದೆ. ಸ್ವಂತ ಕಟ್ಟಡವಿಲ್ಲದಿರುವುದನ್ನು ತಿಳಿಸುತ್ತಾ ಸಮಾಜ ಬಾಂಧವರೆಲ್ಲರ ಸಹಕಾರವನ್ನು ಕೋರಿದರು.

ಈ ಸಂದರ್ಭದಲ್ಲಿ ಪೋಷಕ ಸದಸ್ಯರಾಗಿ ನಮ್ಮೊಂದಿಗೆ ಸೇರಿದ ಮೂವರು ಸದಸ್ಯರನ್ನು ಗೌರವಿಸಲಾಯಿತು. ನಂತರ ಮಹಿಳಾ ವೇದಿಕೆಯ ಸದಸ್ಯರಿಂದ ನಡೆದ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರಿಂದ ಮೆಚ್ಚುಗೆ ಗಳಿಸಿತು. ಕು। ಅಪರ್ಣ ಪಿ. ರಾವ್ ಹಾಗೂ ಕು। ಸೌಜನ್ಯಾ ಶರ್ಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರೂಪಿಸಿದರು.

ಸಂಘದ ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್ ಸಿ. ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀಮತಿ ಸಾವಿತ್ರಿ ಪುಷ್ಪರಾಜ್ ಇವರು ಧನ್ಯವಾದಗಳನ್ನು ಅರ್ಪಿಸಿದರು. ಸಂಘದ ಸದಸ್ಯರಿಗೆ, ಅತಿಥಿಗಳಿಗೆ ಬೆಳಗ್ಗಿನ ಉಪಾಹಾರ, ಪಾನೀಯ ಹಾಗೂ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

## ಪ್ರತಿಭಾ ಪುರಸ್ಕಾರ

ಶ್ರೀ ಸುಬ್ರಹ್ಮಣ್ಯ ಸಭಾದ 'ನಾಡಹಬ್ಬ' ಕಾರ್ಯಕ್ರಮದಲ್ಲಿ 2021-22ರ ಶೈಕ್ಷಣಿಕ ವರ್ಷದಲ್ಲಿ S.S.L.C. ಮತ್ತು P.U.C.ಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ 35 ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ಸೌಭದ್ರಾ ಸದಾಶಿವ ಶಾಸ್ತ್ರಿಗಳು ಫಲ, ಪುಷ್ಪ, ಸ್ಮರಣಿಕೆ, ಆಶೀರ್ವಾದಪೂರ್ವಕ ಸಣ್ಣ ನಿಧಿಯೊಂದಿಗೆ ಅಭಿನಂದಿಸಿದರು.




ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

Prop. : SUDHAKAR BELLE
: 9845193103/ 9481563103
**KARAN DIGITAL STUDIO**
Sadasukh Building, Nr. Postoffice, Padubidri - 574 111
Opp. Busstand, Belman
All Marriage & Other functions
Photography & Videography Available

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

# ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಕಾಸರಗೋಡು ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶ

ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶವು ತಾ. 30–10–2022ರಂದು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಭಾಂಗಣದಲ್ಲಿ ನಡೆಯಿತು. ಅಧ್ಯಕ್ಷರಾದ ಡಾ. ಕೆ. ಕೆ. ಶ್ಯಾನುಭೋಗ್ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾರ್ಯದರ್ಶಿ ಶ್ರೀ ವಸಂತರಾಜ ವಿ. ಪಿ. ಮತ್ತು ಮಹಿಳಾ ಘಟಕದ ಕಾರ್ಯದರ್ಶಿ ಶ್ರೀಮತಿ ಸುಮಂಗಲಾ ಮನೋಹರ್ ವರದಿಗಳನ್ನು ಹಾಗೂ ಶ್ರೀ ಮನೋಹರ ಎ. ಮತ್ತು ಶ್ರೀಮತಿ ಪ್ರಭಾ ರಮೇಶ್ ಲೆಕ್ಕಪತ್ರಗಳನ್ನು ಮಂಡಿಸಿದರು. ಆ ಬಳಿಕ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ನೂತನ ಅಧ್ಯಕ್ಷರಾಗಿ ಶ್ರೀ ಕೆ. ಜಿ. ಶ್ಯಾನುಭೋಗ್, ಉಪಾಧ್ಯಕ್ಷರಾಗಿ ಶ್ರೀ ರಾಜೇಂದ್ರ ಬಜಕೂಡ್ಲು ಮತ್ತು ಡಾ. ಶಂಕರರಾಜ್ ಕಾಸರಗೋಡು, ಕಾರ್ಯದರ್ಶಿಯಾಗಿ ಶ್ರೀ ಮನೋಹರ ಎ., ಜತೆ ಕಾರ್ಯದರ್ಶಿಗಳಾಗಿ ಶ್ರೀ ಹರೀಶ ಅಜ್ಜಾವರ ಮತ್ತು ಶ್ರೀ ಅಶೋಕ್ ಕೇದಿಗೆ, ಕೋಶಾಧಿಕಾರಿಯಾಗಿ ಶ್ರೀ ವಸಂತರಾಜ ವಿ. ಪಿ. ಇವರನ್ನು ಆಯ್ಕೆ ಮಾಡಲಾಯಿತು. ಮಹಿಳಾ ಘಟಕದ ಪದಾಧಿಕಾರಿಗಳಾಗಿ ಅಧ್ಯಕ್ಷೆ ಶ್ರೀಮತಿ ಕೃಪಾ ಕೆ. ಜಿ. ಶ್ಯಾನುಭೋಗ್, ಉಪಾಧ್ಯಕ್ಷೆಯರಾಗಿ ಶ್ರೀಮತಿ ವಿಜಯಲಕ್ಷ್ಮಿ ಶ್ಯಾನುಭೋಗ್ ಮತ್ತು ಡಾ. ಗೀತಾ ಸತ್ಯನಾಥ್, ಕಾರ್ಯದರ್ಶಿಯಾಗಿ ಶ್ರೀಮತಿ ಮಾಲತಿ ಜಗದೀಶ್, ಜತೆ ಕಾರ್ಯದರ್ಶಿಯರಾಗಿ ಶ್ರೀಮತಿ ಲಕ್ಷ್ಮಿ ರಾಜೇಂದ್ರ ಮತ್ತು ಶ್ರೀಮತಿ ನಯನಾ ಶಂಕರರಾಜ್ ಹಾಗೂ ಕೋಶಾಧಿಕಾರಿಯಾಗಿ ಶ್ರೀಮತಿ ಸುಮಂಗಲಾ ಮನೋಹರ್ ಅಯ್ಕೆಯಾದರು. ಅಪರಾಹ್ನ ನಡೆದ ಜಿಲ್ಲಾ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಡಾ. ಶೋಭಿತಾ ಸತೀಶ್ ಪುತ್ತೂರು ಇವರು ಉದ್ಘಾಟನೆಯನ್ನು ನೆರವೇರಿಸಿ ವಾರ್ಷಿಕ ಸಂಚಿಕೆ 'ಶಿವಗಂಗಾ'ವನ್ನು ಬಿಡುಗಡೆಗೊಳಿಸಿ ಸಂಘಟನೆಯೊಂದಿಗೆ ತಮ್ಮ ಸುದೀರ್ಘ ಕಾಲದ ನಂಟನ್ನು ಸ್ಮರಿಸಿದರು. ಆ ಬಳಿಕ ವಿವಿಧ ಪ್ರಶಸ್ತಿ, ಪುರಸ್ಕಾರಗಳ ವಿತರಣೆ ನಡೆಯಿತು. ಶ್ರೀ ಸುಕುಮಾರ ಆಲಂಪಾಡಿ (ಸಮಾಜ ರತ್ನ), ಶ್ರೀ ರಾಮಕೃಷ್ಣಯ್ಯ ಕಂಬಾರು (ಯಕ್ಷಸಿರಿ), ಶ್ರೀ ಸತ್ಯನಾರಾಯಣ ನೀಲಂಗಳ (ಸಮಾಜಸೇವೆ), ಶ್ರೀಮತಿ ಕೃಪಾ ಕೆ. ಜಿ. ಶ್ಯಾನುಭೋಗ್ (ಸಮಾಜ ಕೀರ್ತಿ), ಶ್ರೀ ಶಿಶಿರ್ ಎಂ. ಅಯ್ಯರ್ (ಯುವಶ್ರೀ), ಕು। ದಿವ್ಯಶ್ರೀ (ಲಲಿತಕಲೆ), ಕು। ಚೈತ್ರಾ ಶ್ಯಾನುಭೋಗ್ (ಕಲಾಪ್ರತಿಭೆ) ಮತ್ತು ಕು। ಕಾವ್ಯಶ್ರೀ (ಕ್ರೀಡಾರತ್ನ) ಇವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಗಳ ಪ್ರಾಯೋಜಕರಾಗಿ ಶ್ರೀಮತಿ ಗಿರಿಜಾ ಕೆ. ವಿ. ಮತ್ತು ಮಕ್ಕಳು,



ಶ್ರೀ ರಮೇಶ್ ಕೆ. ವಿ. ಪಿಲಿಕುಂಜೆ, ಶ್ರೀ ಮುರಳೀಧರ ಕಾಸರಗೋಡು, ಶ್ರೀ ವೇಣುಗೋಪಾಲ ಶ್ಯಾನುಭೋಗ್ ಮಂಗಳೂರು, ಶ್ರೀ ಚಂದ್ರಶೇಖರ ಮರ್ದಂಬೈಲು ಮತ್ತು ಡಾ. ಸತ್ಯನಾಥ್ ಎಂ. ಇವರು ಸಹಕರಿಸಿದರು. ಕೊರೊನಾ ಪಿಡುಗಿನ ತಾಂಡವದ ನಡುವೆಯೂ ವೃತ್ತಿಯ ಮಹತ್ವವನ್ನು ಎತ್ತಿಹಿಡಿದು ತಮ್ಮ ಚಿಕಿತ್ಸಾಲಯಗಳನ್ನು ತೆರೆದಿಟ್ಟು, ಕಾಯಿಲೆಯಿಂದ ಕಂಗೆಟ್ಟಿದ್ದ ಜನರಿಗೆ ಸಾಂತ್ವನವನ್ನು ನೀಡಿದ ಡಾ. ಸತ್ಯನಾಥ್ ಎಂ., ಡಾ. ಶಂಕರರಾಜ್ ಕಾಸರಗೋಡು ಮತ್ತು ಡಾ. ತೇಜಸ್ವಿ ಎಂ. ವ್ಯಾಸ ಇವರಿಗೆ ವಿಶೇಷ ಅಭಿನಂದನೆ ಸಲ್ಲಿಸಲಾಯಿತು. ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಹಂತದ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ವಿತರಿಸಲಾಯಿತು. ಸದಸ್ಯರಿಗಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನೂ, ಕ್ರಿಕೆಟ್ ಪಂದ್ಯದಲ್ಲಿ ವಿಜೇತ ತಂಡಗಳಿಗೆ ಟ್ರೋಫಿಗಳನ್ನು ವಿತರಿಸಲಾಯಿತು. ಸಭಾದ ಸದಸ್ಯ ಕಲಾವಿದ, ಕಲಾವಿದೆಯರಿಂದ ಹಾಡು, ನೃತ್ಯ, ಹಾಸ್ಯ, ಯಕ್ಷಗಾನ ಪ್ರದರ್ಶನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನಸೂರೆಗೈದವು. ಯುವ ಕಲಾವಿದೆ ಕು. ಶ್ರಾವ್ಯಶ್ರೀ ಉಬರಳೆಯ ಚಿತ್ರ ಪ್ರದರ್ಶನವೂ ಆಕರ್ಷಕವಾಗಿತ್ತು. ಉಪಾಧ್ಯಕ್ಷ ಪ್ರೊ. ಶ್ರೀನಾಥ್ ಎ. ಸ್ವಾಗತಿಸಿ ಕಾರ್ಯದರ್ಶಿ ಶ್ರೀ ವಸಂತರಾಜ ವಿ. ಪಿ. ವಂದಿಸಿದರು.

## ಮಕ್ಕಳ ಜೀವನ ಹೂ ಬನವಾಗಲಿ

ಬನ್ನಿರಿ ಮಕ್ಕಳೆ ಮುದ್ದಿನ ಮಕ್ಕಳೆ ।
ನಿಮಗಿದೊ ನಮ್ಮೆಲ್ಲರ ಪ್ರೀತಿಯ ನಮನ ।
ನಿಮಗೆ ಜಗದ ಮಾತೆಯರ ಪ್ರೀತಿಯ ಬಾಗಿನ ।
ನಿಮ್ಮ ನಗು ಹೆತ್ತೊಡಲಿಗೆ ಅಮೃತ ಪಾನ ॥ ೧ ॥

ಮಕ್ಕಳು ಮಾನವ ಲೋಕದ ಸುಂದರ ಹೂಗಳು ।
ನಿಮ್ಮ ಜೀವನ ಅರಳುವ ಹೂ ಬನವಾಗಲಿ ।
ಅರಳಿ ನಗುವ ನಿಮ್ಮ ನಗು ಮೊಗದಲಿ ।
ಚಿಂತೆಯ ಕಾರ್ಮೋಡವು ಹಬ್ಬದಿರಲಿ ॥ ೨ ॥

ಮಕ್ಕಳೆ ನೀವು ಸಕಲ ಸ್ಪರ್ಧೆಯಲ್ಲಿ ಭಾಗವಹಿಸಿ ।
ನಿಮ್ಮ ಧೈರ್ಯ ಪ್ರತಿಭೆಗಳನು ಪ್ರದರ್ಶಿಸಿ ।
ನಿಮಗಿರುವ ಕಲೆ ಜ್ಞಾನದ ಬೆಳಕನು ಚೆಲ್ಲಿಸಿ ।
ಘನತೆಯ ಮೂಡಿಸಿ ಹೊರಹೊಮ್ಮಿಸಿ ॥ ೩ ॥

ಹಿರಿಯರ ಜೀವನ ಶೈಲಿಯ ಬದುಕಲಿ ಬೆರೆಸಿ ।
ದೇಶದ ಸಂಸ್ಕೃತಿಯ ಸಿರಿಯನು ಉಳಿಸಿ ।
ಕಡೆಗಣಿಸದಿರಿ ನಿಮ್ಮ ಕಲಿಕೆ ವಿದ್ಯಾರ್ಜನೆಯನು ।
ಅರಿಯಿರಿ ಬಾಳಿನಲಿ ಸಮಯದ ಹಿರಿಮೆಯನು ॥ ೪ ॥

ಮಕ್ಕಳೆ ನಿಮ್ಮಯ ಬುದ್ಧಿಗುಣ ಸ್ವಭಾವವು ।
ತುಂಬಿದ ಕೊಡ ತುಳುಕದಂತಿರಬೇಕು ।
ನಿಮ್ಮ ನಡೆನುಡಿ ಶಿಸ್ತು ಸಂಯಮವು ।
ಮುತ್ತು ರತ್ನ ಹವಳ ಮಾಣಿಕ್ಯದಂತಿರಬೇಕು ॥ ೫ ॥

ಮಕ್ಕಳ ಕಂಗಳಲಿ ಹೊಳೆಯಲಿ ಕಾಂತಿಯ ಹೊಳಪು ।
ಬದುಕಲಿ ತುಂಬಿರಲಿ ನವ ತಾರುಣ್ಯದ ಬೆಳಕು ।
ನೀವಿಲ್ಲದ ಮನೆ ದೀಪವಿಲ್ಲದ ಮನೆಯಂತೆ ।
ನಿಮ್ಮ ಆಟ ಪಾಠ ತುಂಟಾಟ ಸಂತೋಷದ ಸಾಗರದಂತೆ ॥ ೬ ॥

ಮಕ್ಕಳೆ ನೀವು ನಗು ನಗುತಾ ಸಂತಸದಿಂದಿರಲು ।
ನಿಮ್ಮ ನಗುವೇ ನಮ್ಮ ಜೀವನದ ಸವಿಗಾನ ।
ತಂದೆ ತಾಯಿಯರೊಂದಿಗೆ ಪ್ರೀತಿ ಪ್ರೇಮದಿ ಬೆರೆತಿರಲು ।
ನಮ್ಮ ಬಾಳೇ ಸುಖ ನೆಮ್ಮದಿಯ ಸೋಪಾನ ॥ ೭ ॥

– ಶ್ರೀಮತಿ ಮಂಜುಳಾ ಮುರಳೀಧರ್ ರಾವ್, ಮಂಗಳೂರು

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ರೊಲ, ಬಿ.ಎ., ಎಲ್ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241


# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಸಂಭ್ರಮ – ಸಾಂಸ್ಕೃತಿಕ ಕಾರ್ಯಕ್ರಮಗಳ ನೃತ್ಯ ಕಲಾವಿದರು











**ವೈಯಕ್ತಿಕ ನೃತ್ಯ** : 1. ಕು। ಶರಣ್ಯಾ ರಾವ್ 2. ಕು। ಆದ್ಯಶ್ರೀ, ಕು। ಅಂಕಿತಾಶ್ರೀ, ಚಿ। ಆಧೀಶ್

**ಸಮೂಹ ನೃತ್ಯಗಳು** : ನಿರ್ದೇಶನ : **ಶ್ರೀಮತಿ ಅನುರಾಧ ಕಿಶೋರ್**

'ಭಾಗ್ಯದ ಲಕ್ಷ್ಮೀ ಬಾರಮ್ಮ' ಶ್ರೀಮತಿ ಸ್ನೇಹಲತಾ ದಿವಾಕರ್, ಡಾ। ಜಯಲಕ್ಷ್ಮೀ, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಉಷಾ ಪ್ರಭಾಕರ್ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಶ್ರೀಮತಿ ಶ್ಯಾಮಲಾ ಶೇಖರ್, ಶ್ರೀಮತಿ ಪ್ರಭಾ ಪ್ರಭಾಕರ್ ರಾವ್, ಶ್ರೀಮತಿ ಸುಜಾತ ನಾಗರಾಜ್

**ದಾಂಡಿಯಾ ನೃತ್ಯ** : ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಜ್ಯೋತಿ ಪ್ರಸಾದ್, ಶ್ರೀಮತಿ ವೀಣಾ ಗಿರಿಧರ್ ರಾವ್ ಶ್ರೀಮತಿ ಸುನೀಲಾ ಭುಜಂಗ ರಾವ್, ಶ್ರೀಮತಿ ಕರುಣಾ ಬಾಲಕೃಷ್ಣ ರಾವ್, ಶ್ರೀಮತಿ ಭುವನೇಶ್ವರಿ ನಾಗರಾಜ್, ಶ್ರೀಮತಿ ದೀಪಾ ಪ್ರಸಾದ್

**ಮಲೆಯಾಳಿ ನೃತ್ಯ** : ಶ್ರೀಮತಿ ಅನುರಾಧ ಕಿಶೋರ್, ಶ್ರೀಮತಿ ಭಾರತಿ ಸಂಜಯ್, ಶ್ರೀಮತಿ ಸೌಮ್ಯ ಪ್ರಸಾದ್, ಶ್ರೀಮತಿ ರಮ್ಯಾ ಶಾಂತಾರಾಮ್ ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಶುಭಾ ರವಿ, ಶ್ರೀಮತಿ ಕವಿತಾ ಪ್ರದೀಪ್

**ಕುಣಿತ ಭಜನೆ** : ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ಸಂಜಯ್ ರಾವ್, ಶ್ರೀ ರಘುವೀರ್ ಪೆರ್ಡೂರ್, ಶ್ರೀ ಸೋಮಶೇಖರ್, ಶ್ರೀ ರವೀಂದ್ರ ರಾವ್ ಶ್ರೀ ನಾಗರಾಜ್ ಶರ್ಮಾ, ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ

*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4


Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಸಂಭ್ರಮ








ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ 'ದೀಪಾವಳಿ ಸಂಭ್ರಮ'ದಲ್ಲಿ ಧಾರ್ಮಿಕ ಉಪನ್ಯಾಸ ನೀಡಿದ ಸುರತ್ಕಲ್‌ನ ಗೋವಿಂದದಾಸ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೃಷ್ಣಮೂರ್ತಿ ಪಿ. ಇವರು ತುಳುನಾಡಿನಲ್ಲಿ ದೀಪಾವಳಿಯು ಮಹತ್ವದ ಸ್ಥಾನವನ್ನು ಪಡೆದಿದೆ ಎಂದು ಹಲವಾರು ಪುರಾಣ ಕಥೆಗಳನ್ನು ಉಲ್ಲೇಖಿಸಿ ನುಡಿದರು. ಅಜ್ಞಾನದ ಕತ್ತಲನ್ನು ನಿವಾರಿಸುವ ದೀಪದ ಬೆಳಕು ಪ್ರತಿಯೊಬ್ಬರ ಜೀವನವನ್ನು ಬೆಳಗಿಸಲಿ ಎಂದು ಹಾರೈಸಿದರು. ಗಣ್ಯರು ದೀಪ ಪ್ರಜ್ವಲಿಸಿದ ಬಳಿಕ ಶ್ರೀಮತಿ ಮಂಜುಳಾ ಮುರಳೀಧರ್, ಶ್ರೀಮತಿ ಉಷಾ ನಟರಾಜ್, ಕುಮಾರಿ ನಂದಿತಾ ರಾವ್ ಗಣೇಶನ ಸ್ತುತಿಯನ್ನು ಹಾಡಿದರು. ಬಳಿಕ ಹಲವಾರು ವಿನೋದಾತ್ಮಕ ಆಟಗಳನ್ನು ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಶೈಲಜಾ ಶ್ರೀಕಾಂತ್ ನಡೆಸಿಕೊಟ್ಟರು. ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯ 'ಶಿವಸದನ'ಕ್ಕೆ ಹಾರ್ಮೋನಿಯಂ ಕೊಡುಗೆ ನೀಡಿದ ಹಾಗೂ ದೀಪಾವಳಿಯ ವಿಶೇಷ ಭೋಜನದ ಪ್ರಾಯೋಜಕರಾದ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲಿ ಕೇದಿಗೆ, ಬಹುಮಾನಗಳ ಪ್ರಾಯೋಜಕರಾದ ಡಾ. ಜಯಲಕ್ಷ್ಮೀ, ರಂಗೋಲಿ ರಚಿಸಿದ CA. ನಾಗರಾಜ್ ಶರ್ಮರನ್ನು ಗೌರವಿಸಲಾಯಿತು. ಸಾಂಪ್ರದಾಯಿಕ ಉಡುಗೆ ಸ್ಪರ್ಧೆಗಳ ಬಳಿಕ ವೈಯಕ್ತಿಕ ನೃತ್ಯಗಳು, 32 ಕಲಾವಿದರುಗಳನ್ನು ಒಳಗೊಂಡ, ಶ್ರೀಮತಿ ಅನುರಾಧ ಕಿಶೋರ್ ನಿರ್ದೇಶನದ ಮಹಿಳೆಯರ ಭಾಗ್ಯದಾ ಲಕ್ಷ್ಮೀ ಬಾರಮ್ಮ, ದಾಂಡಿಯಾ, ಮಲೆಯಾಳಿ, ಪುರುಷರ ಕುಣಿತ ಭಜನೆಗಳು ಸರ್ವರ ಮನವನ್ನು ರಂಜಿಸಿದವು. ಶ್ರೀ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಪದಾಧಿಕಾರಿಗಳಾದ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಭುವನಾ ನಾಗರಾಜ್, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ, ಶ್ರೀ ಸಾಯಿಪ್ರಸಾದ್ ವ್ಯವಸ್ಥೆಯಲ್ಲಿ ಸಹಕರಿಸಿದರು. ಶ್ರೀ ಸಭಾ ಉಪಾಧ್ಯಕ್ಷರುಗಳಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಡಾ. ಎ. ಪಿ. ಕೃಷ್ಣ ಬಹುಮಾನ ವಿತರಿಸಿದರು. ಶ್ರೀಮತಿ ಸುಕನ್ಯಾ ತೀರ್ಪುಗಾರರಾಗಿ ಸಹಕರಿಸಿದರು. ಬಹುಮಾನ ವಿತರಣೆ, ಸಾಮೂಹಿಕ ನೃತ್ಯ, ಸುಡುಮದ್ದು ಸಿಡಿತ, ವಿಶೇಷ ಖಾದ್ಯಗಳ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

**Publisher :** Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
**Editor :** Sri M. S. Raghunath Rao, Darbe, Puttur
**Printed at :** Rajesh Power Press, Darbe - 574 202, Puttur, D. K.